ಧಾರವಾಡ, ಹಾವೇರಿ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಧಾರವಾಡ
ಲಕ್ಕಮ್ಮನಹಳ್ಳಿ, ಕೈಗಾರಿಕಾ ಪ್ರದೇಶ, ವಿದ್ಯಾಗಿರಿ ಅಂಚೆ, ಧಾರವಾಡ-4
ದೂ: 0836-2467603/2468380 E-mail: dharwarnin@gmail.com ಫ್ಯಾಕ್ಸ್: 0836-2468268

No.DMU/PROD/PIECE-CONTRACT/2021/ 3196 ದಿನಾಂಕ:-09-02-2021

## ಅಲ್ಪಾವಧಿ ತುಂಡು ಗುತ್ತಿಗೆ ಕೆಲಸಗಳ ನಿರ್ವಹಣೆ & ಗುತ್ತಿಗೆ ಕಾರ್ಮಿಕರನ್ನು ಒದಗಿಸುವ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಧಾರವಾಡ, ಹಾವೇರಿ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಹಾಲು ಒಕ್ಕೂಟ ನಿಯಮಿತ, ಧಾರವಾಡವು (ಧಾಮೂಲ್) ವಿವಿಧ ಹಂಗಾಮಿ ತುಂಡು ಗುತ್ತಿಗೆ ಕಾರ್ಯನಿರ್ವಹಣೆ ಸಲುವಾಗಿ, ವಿವಿಧ ವಿಭಾಗ, ವಿವಿಧ ಶೀಥಲೀಕರಣ & ಉಪ ಕೇಂದ್ರಗಳಲ್ಲಿ ದೈನಂದಿನ ಕೆಲಸಗಳಿಗೆ ಅಗತ್ಯವಿರುವ ಗುತ್ತಿಗೆ ಕಾರ್ಮಿಕರನ್ನು ಒದಗಿಸಲು ಭವಿಷ್ಯನಿಧಿ, ಇ.ಎಸ್.ಐ. ಹಾಗೂ ಕಾರ್ಮಿಕ ಇಲಾಖೆಗಳಿಂದ ಅಧಿಕೃತವಾಗಿ ನೊಂದಣಿ ಹೊಂದಿರುವ ಹಾಗೂ ಡೇರಿ ಸಂಸ್ಥೆಗೆ ಅಂದರೆ ಕಹಾಮ/ಅದರ ಅಂಗ ಸಂಸ್ಥೆ/ಒಕ್ಕೂಟಗಳ ಉತ್ಪನ್ನ ಡೇರಿಗಳಲ್ಲಿ ಹಂಗಾಮಿ ತುಂಡು ಗುತ್ತಿಗೆ ಸೇವೆ ಮತ್ತು ಕಾರ್ಮಿಕರನ್ನು ಒದಗಿಸಿದ ಕನಿಷ್ಠ 5 ವರ್ಷ ಅನುಭವ ಹೊಂದಿರುವ ಆಸಕ್ತಿಯುಳ್ಳ ಮತ್ತು ಅರ್ಹ ಗುತ್ತಿಗೆದಾರರಿಂದ 02 ವರ್ಷಗಳ ಅವಧಿಗೆ ಇ-ಟೆಂಡರ್ ಆಹ್ವಾನಿಸಲಾಗಿದೆ.

| ಕ್ರ ಸಂ | ವಿವರ | ಇ.ಎಂ.ಡಿ. ಮೊತ್ತ ರೂ.ಗಳಲ್ಲಿ |
|---|---|---|
| 01 | **ಹಂಗಾಮಿ ತುಂಡು ಗುತ್ತಿಗೆ ಕೆಲಸಗಳು :-**<br>ಎ) ಹಾಲಿನ ಉತ್ಪನ್ನಗಳ ತಯಾರಿಕೆ, ಉತ್ಪನ್ನಗಳನ್ನು ಪ್ಯಾಕ್ ಮಾಡುವುದು, ಪ್ಯಾಕ್ ಮಾಡಿದ ಪದಾರ್ಥಗಳನ್ನು ದಾಸ್ತಾನು ಸ್ಥಳಗಳಿಗೆ ಸಾಗಿಸುವುದು, ಪ್ಯಾಕ್ ಮಾಡಿದ ಉತ್ಪನ್ನಗಳನ್ನು ವಾಹನಗಳಿಗೆ ಲೋಡು ಮಾಡುವುದು, ಹಾಗೂ ಮುಖ್ಯ ಡೇರಿ ಹಾಗೂ ವಿವಿಧ ಶೀತಲೀಕರಣ ಕೇಂದ್ರಗಳಲ್ಲಿಯ ಹಾಲಿನ ಕ್ಯಾನುಗಳನ್ನು ಸ್ವಚ್ಛಗೊಳಿಸುವುದು ಇತ್ಯಾದಿ ಕೆಲಸಗಳು.<br>ಬಿ) ಬಾಯ್ಲರ್ ವಿಭಾಗದಲ್ಲಿ ಪ್ರತಿದಿನ ಬಾಯ್ಲರಿಗೆ ಕಲ್ಲಿದ್ದಲು ಹಾಕುವುದು, ವಾಹನದಿಂದ ಕಲ್ಲಿದ್ದಲನ್ನು ಅನ್ ಲೋಡ್ ಮಾಡುವುದು ಮತ್ತು ಪ್ರತಿದಿನ ಬಾಯ್ಲರಿನಿಂದ ಸುಟ್ಟ ಕಲ್ಲಿದ್ದಲು ಬೂದಿಯನ್ನು ತೆಗೆದು ನಿಗದಿತ ಸ್ಥಳಕ್ಕೆ ಸಾಗಿಸುವುದು.<br>ಸಿ) ಉಪ್ಪು, ಸಕ್ಕರೆ, ಕಾಸ್ಟಿಕ್ ಸೋಡಾ, ಫಿಲ್ಮ ರೋಲ್, ನೈಟ್ರಿಕ್ ಆಸಿಡ್ & ಸಲ್ಫೂರಿಕ್ ಆಸಿಡ್ ಕಾರ್ಬಾಯ್, 3 & 5 ಪೊದರಿನ ರಟ್ಟಿನ ಪೆಟ್ಟಿಗೆಗಳು, ಅಲ್ಯುಮೀನಿಯಂ ಫಾಯಲ್ ರೋಲ್ಸ್ ಮತ್ತು ಪ್ಯಾಕಿಂಗ್ ವಸ್ತುಗಳು ಇತ್ಯಾದಿಗಳನ್ನು ವಾಹನದಿಂದ ಉಗ್ರಾಣದ ನಿಗದಿತ ಸ್ಥಳಕ್ಕೆ ಇಳಿಸುವುದು. | 1,00,000-00 |
| 02 | **ಗುತ್ತಿಗೆ ಕಾರ್ಮಿಕರನ್ನು ಒದಗಿಸುವುದು:-**<br>ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಮುಖ್ಯಡೇರಿ ಧಾರವಾಡದ ವಿವಿಧ ವಿಭಾಗಳಲ್ಲಿ, ವಿವಿಧ ಶೀಥಲೀಕರಣ ಕೇಂದ್ರಗಳಲ್ಲಿ, ವಿವಿಧ ಉಪಕೇಂದ್ರಗಳಲ್ಲಿ, ಮತ್ತು ದೈನಂದಿನ ಕೆಲಸಗಳಿಗೆ ಅತೀನುರಿತ, ನುರಿತ ಮತ್ತು ನುರಿತರಲ್ಲದ ಕಾರ್ಮಿಕರನ್ನು ಒದಗಿಸಲು. | 50,000-00 |

ಆಸಕ್ತಿಯುಳ್ಳ ಟೆಂಡರುದಾರರು ಟೆಂಡರ್ ಪ್ರೊಸೆಸ್ಸಿಂಗ್ ಶುಲ್ಕ (Non-refundable) ವನ್ನು ಮತ್ತು ಮೇಲಿನ EMD ಮೊತ್ತವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಯಾವುದಾದರೂ ಒಂದು ನಿರ್ದಿಷ್ಟ ಮೂಲದಿಂದ ಟೆಂಡರ್ ದಸ್ತಾವೇಜುವಿನಲ್ಲಿ ತಿಳಿಸಿದಂತೆ ಭರಣಾ ಮಾಡಬಹುದಾಗಿದೆ. ಹೆಚ್ಚಿನ ವಿವರಗಳಾದ ತುಂಡು ಗುತ್ತಿಗೆಯ ಕೆಲಸಗಳು, ಗುತ್ತಿಗೆ ಕಾರ್ಮಿಕರ ಕೆಲಸಗಳ ವಿವರ ಹಾಗು ಕರಾರು ಮತ್ತು ಷರತ್ತುಗಳನ್ನು

ವೆಬ್‌ಸೈಟ್ http://eproc.karnataka.gov.in ನಲ್ಲಿ ಲಾಗ್‌ಇನ್ ಆಗಿ ಅಥವಾ ಸಹಾಯವಾಣಿ ಸಂಖ್ಯೆ:-080-460110000 / 22631200 ಅಥವಾ ಇ-ಮೇಲ್:- **support@ihelpdsk.com** ರ ಮೂಲಕ ಸಂಪರ್ಕಿಸಿ ಟೆಂಡರ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮೂಲ್ ಯಾವುದೇ ರೀತಿ ಜವಾಬ್ದಾರರಲ್ಲ.

| | | |
|---|---|---|
| 1 | ಪೂರ್ವಭಾವಿ ಸಭೆ(ಧಾಮೂಲ್ ಆವರಣದಲ್ಲಿ) | ದಿ:-02-03-2021 ರಂದು ಬೆಳಿಗ್ಗೆ 11 ಕ್ಕೆ |
| 2 | ಇ-ಟೆಂಡರ ಸಲ್ಲಿಸುವ ಕೊನೆಯ ದಿನಾಂಕ & ವೇಳೆ | ದಿ:-12-03-2021 ರ ಸಂಜೆ 4-00 ರವರೆಗೆ |
| 3 | ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ | ದಿ:-15-03-2021 ರ ಸಂಜೆ 4-30 ರ ನಂತರ |
| 4 | ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ | ದಿ:-18-03-2021 ರ ಬೆಳಿಗ್ಗೆ 10-00 ರ ನಂತರ |

ಕಾರ್ಯನಿರ್ವಾಹಕ ನಿರ್ದೇಶಕರು